ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯವರು **ಶಾ.ಮಂ. ಕೃಷ್ಣರಾಯರು** ಕನ್ನಡ, ಕೊಂಕಣಿ ಮತ್ತು ಮರಾಠಿ ಸಾಹಿತ್ಯ ಜ್ಞಾನವುಳ್ಳವರು. ಓದಿದ್ದು ಸಿದ್ದಾಪುರದಲ್ಲಿ. ನಾಲ್ಕು ದಶಕಗಳ ಕಾಲ ಗೋವಾದಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಕೊಂಕಣಿ, ಮರಾಠಿ, ಹಿಂದೀ ಭಾಷೆಯಿಂದ ಮಹತ್ವದ ಕಥೆ–ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. 90ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಅವರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಮಾಡುತ್ತಿದ್ದರು. ಆ ದಿನಗಳಲ್ಲಿ ಬಿಸಿಲು, ಮಳೆ, ಚಳಿಯೆನ್ನದೆ ಮೈಮುರಿದು ದುಡಿಯಬೇಕಾಗಿತ್ತು. ದನ ಕಾಯಲು ಹೋಗಬೇಕಾಗಿತ್ತು. ಕೊಟ್ಟಿಗೆಯ ಕೆಲಸ ಮಾಡಬೇಕಾಗಿತ್ತು. ದುಡಿದರೂ ತಕ್ಷಣ ದುಡ್ಡು ಸಿಗುತ್ತಿರಲಿಲ್ಲ. ಫಸಲು ಬರುವವರೆಗೆ ಕಾಯ ಬೇಕಾಗಿತ್ತು. ಹೊಲದಲ್ಲಿ ಆಳುಗಳನ್ನು ಹಾಕಿ ಉತ್ತು ಬಿತ್ತು ಮಾಡುವಂತಿರಲಿಲ್ಲ. ಹಕ್ಕಿ, ದನಕರುಗಳಿಂದ ಫಸಲು ಕಾಯ್ದುಕೊಳ್ಳಬೇಕಾಗಿತ್ತು. ಇವರು ತಮ್ಮ 14ನೆಯ ವಯಸ್ಸಿನಿಂದ 21ನೆಯ ವಯಸ್ಸಿನವರೆಗೆ ಪುಸ್ತಕವನ್ನು ಕಣ್ಣೆತ್ತಿಯೂ ನೋಡುವುದು ಸಾಧ್ಯವಾಗಲಿಲ್ಲ. ಮೂರು ವರ್ಷ ಕೃಷಿಕಾರ್ಯದಲ್ಲಿ ಸಂಪೂರ್ಣ ತೊಡಗಿಕೊಂಡರು. ಏಳನೆಯ ತರಗತಿ ಮುಗಿಸಿ 8ನೇ ತರಗತಿ ಪರೀಕ್ಷೆಯನ್ನು ಬಾಹ್ಯ ವಿದ್ಯಾರ್ಥಿಯಾಗಿ ತೆಗೆದುಕೊಂಡು ಪಾಸಾದರು. ಒಬ್ಬನೇ ಮಗನಾದ್ದರಿಂದ ಸೈನ್ಯ ಸೇರಲು ತಾಯಿ ಬಿಡುತ್ತಿರಲಿಲ್ಲ. ಅಲ್ಲದೇ ಗಂಡ ಮನೆ ಬಿಟ್ಟು, ನಾಪತ್ತೆಯಾದಾಗ ಅನುಭವಿಸಿದ ಕಷ್ಟಗಳ ನೆನಪು ಕಾಡಿ, ಮಗನೂ ಸೈನ್ಯ ಸೇರಿದರೆ ತಾನು ಒಬ್ಬಂಟಿ ಆಗಬೇಕಾಗುತ್ತದೆ ಎಂಬ ಭಯವೂ ಇತ್ತು.

ಒಂದುದಿನ ಸ್ನೇಹಿತರು ಬಂದು, ಕಾರವಾರದಲ್ಲಿ ಸೈನ್ಯಕ್ಕೆ ಸೇರಿಸಿಕೊಳ್ಳಲು ಮಿಲಿಟರಿಯವರು ಬಂದಿದ್ದಾರೆ ಎಂದರು. ಇದರಿಂದ ಉತ್ಸಾಹಗೊಂಡ ಮಹಾಬಳೇಶ್ವರ ಅವರು ಎಂದಿನಂತೆ 'ದನ ಕಾಯಲು ಹೋಗುತ್ತೇನೆ' ಎಂದು ಅಮ್ಮನೊಡನೆ ಹೇಳಿ ಕಾರವಾರಕ್ಕೆ ಹೋದರು. ಅಲ್ಲಿ ಸಂದರ್ಶನದಲ್ಲಿ ಆಯ್ಕೆಯೂ ಆದರು. ಆ ಕಾಲದಲ್ಲಿ ಆಯ್ಕೆಯಾದವರನ್ನು ಮತ್ತೆ ಮನೆಗೆ ಹೋಗಲು ಬಿಡುತ್ತಿರಲಿಲ್ಲ. ಬಸ್ಸಿನಲ್ಲಿ ತುಂಬಿ ನೇರವಾಗಿ ಬೆಳಗಾವಿಯ ಮರಾಠಾ ಲೈಟ್ ಇನ್‌ಫಂಟ್ರಿ ಕ್ಯಾಂಪಿಗೆ ಕರೆದೊಯ್ಯುತ್ತಿದ್ದರು.

ಇತ್ತ ತಾಯಿಗೆ ಸುದ್ದಿ ತಿಳಿದು ಬಾಯಿಬಾಯಿ ಬಡಿದುಕೊಂಡಳು. ಸೈನ್ಯದ ಆರಂಭಿಕ ತರಬೇತಿಯ ದಿನಗಳು ಕಷ್ಟದಾಯಕ. ಮಹಾಬಳೇಶ್ವರ ಮನಸ್ಸು ಕೊಟ್ಟು ತರಬೇತಿ ಪಡೆದು ಮೇಲಧಿಕಾರಿಗಳ ಮೆಚ್ಚುಗೆ ಪಡೆದು ಮೂರು ತಿಂಗಳಲ್ಲಿ ಪ್ಲಟೂನ್ ಲೀಡರಾದರು. ಒಂದು ವರ್ಷ ತರಬೇತಿಯ ನಂತರ ಹೆಚ್ಚಿನ ತರಬೇತಿಗೆ ಡಾರ್ಜಿಲಿಂಗ್‌ಗೆ ಕಳುಹಿಸಿದರು. ಅಲ್ಲಿ ಆರು ತಿಂಗಳು ಮೈಕೊರೆಯುವ ಚಳಿಯಲ್ಲಿ ಕೆಲಸ ಮಾಡಿದ ಬಳಿಕ ಒಂದು ವರ್ಷದ ಮಟ್ಟಿಗೆ ವಿಶ್ವಸಂಸ್ಥೆಯ ಮುಖಾಂತರ ಶಾಂತಿ ಸೈನಿಕ ಎಂದು ನಿಯುಕ್ತಿಗೊಂಡು ಈಜಿಪ್ಟ್– ಇಸ್ರೇಲ್ ಸೀಮೆಯ ಪ್ಯಾಲೆಸ್ಟೇನಿನಲ್ಲಿದ್ದರು. ಅಲ್ಲಿಂದ ಬಂದ ಬಳಿಕ ಇವರನ್ನು ರಾಜಸ್ಥಾನದ ಮರುಭೂಮಿಯ ಸೀಮೆ ಕಾಯುವ ಕೆಲಸಕ್ಕೆ ಕಳುಹಿಸಿದರು. ಒಂದು ಬಾರಿಯಂತೂ ರೋಡ್ ಮಾರ್ಚ್ ಮಾಡುತ್ತ ಪಾಕಿಸ್ತಾನದ ಕೊನೆಯ ಪೋಸ್ಟ್ ಇರುವ ಮೊನಾಕ್‌ವರೆಗೂ ಹೋಗಿದ್ದರು. 1965ರಲ್ಲಿ ಭಾರತ–ಪಾಕಿಸ್ತಾನದ ಯುದ್ಧ ಆರಂಭವಾದಾಗ ಇವರು ಮಥುರೆಯಲ್ಲಿದ್ದರು. ಮೇಲಧಿಕಾರಿಗಳ ಆಜ್ಞೆಯಂತೆ ಗಂಟುಮೂಟೆ ಕಟ್ಟಿಕೊಂಡು ಎರಡು ದಿನ ಪಯಣಿಸಿ ಫಿರೋಜಪುರದ ಆಚೆಗೆ ಹುಸೇನಿವಾಲಾ ಡಿಫೆನ್ಸ್ ಕ್ಯಾಂಪ್ ತಲುಪಿದರು.

